**ಈ ದಿನ ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರರಿಂದಃ**

ನಾನು ಪಂಚಾಯಿತಿ ಕಚೇರಿಯಲ್ಲಿ ಇದ್ದಾಗ ಪೋಲಿಸ್‌ರಿಂದ ಪಿ ಡಿ ಓ ರವರಿಗೆ ಪೋನ್ ಕರೆ ಬಂದಿತ್ತು, ನಂತರ ಅವರು ನನಗೆ ವಿಷಯ ಹೇಳಿದರು. ಪಿ ಡಿ ಓ ರವರು ನನಗೆ ಸಂಜೆ 5-00 ಗಂಟೆಗೆ ಪೋನ್ ಮಾಡಿ ಹೇಳಿದರು. ನೋಟಿಸ್ ಪಡೆದ ನಂತರ ನೇರವಾಗಿ ಸ್ಥಳಕ್ಕೆ ಹೋಗಿದ್ದೆ. ನಾನು ಹೋದ ನಂತರ ನನ್ನ ಮುಂದೆ ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಆಗ ಸಮಯ ಸಂಜೆ 6-00 ಗಂಟೆ ಆಗಿತ್ತು. ಸ್ಥಳದಲ್ಲಿ ನಾವು ಪೋಲಿಸರನ್ನು ಬಿಟ್ಟರೆ ಬೇರೆ ಯಾರು ಇರಲಿಲ್ಲ. ನನ್ನ ಮುಂದೆ ಬರವಣಿಗೆ ಮಾಡಿ ನನ್ನ ಸಹಿ ಪಡೆದುಕೊಂಡರು. ಸದರಿ ದಿನಾಂಕದಂದು ನನ್ನ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮಾಡಿರುವುದಿಲ್ಲ. ಠಾಣೆಯಲ್ಲಿ ಪೋಲಿಸರು ಮಹಜರ್ ಗೆ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ